CC No.465/2023
**PW-1**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ**

**ದಿನಾಂಕ 27.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ TN ವಕೀಲರಿಂದ**

ದೂರು ಕೊಟ್ಟ ದಿನಾಂಕ, ತಿಂಗಳು ವರ್ಷ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಹೇಳಿಕೆ ದೂರನ್ನು ನೀಡಿರುತ್ತೇನೆ. ದೂರು ಕೊಡಲು ನಾನು ಒಬ್ಬನೇ ಠಾಣೆಗೆ ಹೋಗಿದ್ದು ಆಗ ಬೆಳಿಗ್ಗೆ 9 ಗಂಟೆ ಆಗಿತ್ತು. KSRTC ಬಸ್ಸ ನಂ. ಗೊತ್ತಿಲ್ಲ. ನನ್ನ ತಮ್ಮ ಬಸ್ಸಿನ ಚಾಲಕ ಆಗಿದ್ದ ಎಂದು ತೋರಿಸಲು ಪೋಲಿಸರಿಗೆ ದಾಖಲಾತಿ ನೀಡಿಲ್ಲ. ಬಸ ನಿಲ್ದಾಣದಲ್ಲಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ಅಂದಾಜು 10-15 ವರ್ಷಗಳಿಂದ ಮಾತುಕತೆ ಇರುವುದಿಲ್ಲ ಎಂದರೆ ಸರಿ. ನಮಗೆ ಮತ್ತು ಆರೋಪಿತರು ನಡುವೆ ಜಮೀನು ಕುರಿತು ವೈಮನಸ್ಸು ಇದೆ ಎಂದರೆ ಸರಿ. ಕನಕವೃತ್ತ ಮಸರಕಲ್ ಬಸ ನಿಲ್ದಾಣದಿಂದ ಸ್ವಲ್ಪ ಅಂತರ ಇದೆ ಎಂದರೆ ಸರಿ. ಸದರಿ ವೃತ್ತದ ಹತ್ತಿರ ಗುಂಟ್ರಾಳ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. 1 ನೇ ಆರೋಪಿ ದ್ವಿಚಕ್ರ ವಾಹನದ ನಂ. ನನಗೆ ಹೇಳಲು ಬರುವುದಿಲ್ಲ. ಮುಮಾ-1 ಮತ್ತು 2 ರಂತಹ ಬಿಡಿಗೆಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಸದರಿ ದಿನ ಆರೋಪಿತರು ನನ್ನ ತಮ್ಮನಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.